ನಾವು ಅಲ್ಲಲ್ಲಿಯೇ ನೇಮಕ ಮಾಡಿಕೊಳ್ಳುವುದಕ್ಕೆ ಕ್ರಮವನ್ನು ತೆಗೆದು ಕೊಳ್ಳುತ್ತೇವೆ ಇಡೀ ರಾಜ್ಯದ ದೃಷ್ಟಿಯಿಂದ ತಾವು ನಮಗೆ ಸಹಕಾರವನ್ನು ಮಾಡಬೇಕು ತಪ್ಪು ಸಂಕೇತಗಳು ಯಾವುದು ಬರಬಾರದು ನಾವು ತೆಗೆದುಕೊಂಡಿರುವಂತಹ ಯಾವುದೇ ಕಾಯಿದೆಯು ಕೂಡ ಉಲ್ಲಂಘನೆ ಯಾಗಿರುವುದಕ್ಕೆ ಯಾವುದೇ ರೀತಿಯ ತೊಂದರೆ ಹುಬ್ಬಳ್ಳಿ medical college KIMS ಗೆ ಆಗುವುದಿಲ್ಲ ಇದಕ್ಕೆ ರಾಜ್ಯದ ಹಿತದೃಷ್ಟಿಯಿಂದ ಇಡೀ ಸದನದ ಸಹಕಾರ ಬೇಕೆಂದು ನಾನು ಈ ಉತ್ತರವನ್ನು ಹೇಳುತ್ತಿದ್ದೇನೆ

ಶ್ರೀ ಎಸ್ ಎಸ್ ಪಾಟೀಲ್ ಕ್ಲಿಯರ್ ಎಂದು ಹೇಳಿದಂತಾಯಿತು ಹಾಗಾದರೆ ಏನು ಮಾಡುವುದು? ಎಲ್ಲರೂ ಕೇಳುತ್ತಾರಲ್ಲಾ? ಅಲ್ಲಿ ಪರಿಸ್ಥಿತಿ ಏನಿದೆ, ಅದರ ಬಗ್ಗೆ ತಾವು ಸಮರ್ಥನೆ ಮಾಡಿಕೊಂಡರೆ ನಾವು ವರ್ಕ್ ಮಾಡುತ್ತೇವೆಂದು ಅವರು ನೇರವಾಗಿ ಹೇಳಿದ್ದಾರೆ

ಊ) ವಿಷಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೇರಿಯಾ ವ್ಯಾಪಕವಾಗಿ ಹರಡಿರುವ ಬಗ್ಗೆ

ಶ್ರೀ ಕೆ ಜಯಪ್ರಕಾಶ ಹೆಗಡೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೇರಿಯಾ ಬಹಳ ವ್ಯಾಪಕವಾಗಿ ಹಬ್ಬುತ್ತಿದೆ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೇನೆ ಅದಕ್ಕೆ ಅವರು ಔಷಧವನ್ನು ಕೊಟ್ಟಿದ್ದಾರೆ, ಸ್ಟ್ಯಾಫ್ ಇಲ್ಲ ಅದಕ್ಕಾಗಿ ನಾನು ಸರ್ಕಾರವನ್ನು ಕೇಳುತ್ತಿದ್ದೇನೆ ಔಷಧವನ್ನು ಕೊಟ್ಟು ಸ್ಟ್ಯಾಫ್ ಇಲ್ಲದಿದ್ದರೆ ಏನು ಬಂತು ಅತಿ ಶೀಘ್ರದಲ್ಲಿ ಎಲ್ಲಾ ಭಾಗಕ್ಕೂ ಸ್ವಲ್ಪ ಸ್ಟ್ಯಾಫ್‌ಅನ್ನು ಹಾಕಬೇಕೆಂದು ಆರೋಗ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಜಯಪ್ರಕಾಶ ಹೆಗಡೆಯವರು ಸ್ವತಃ ನನ್ನ ಹತ್ತಿರ ಮಲೇರಿಯಾ ಪ್ರಕರಣದ ಬಗ್ಗೆ ಮಾತನಾಡಿದ್ದಾರೆ ವಿಶೇಷವಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಜಿಲ್ಲೆಯಲ್ಲಿ ಮಲೇರಿಯಾ ಈ ಸಂದರ್ಭದಲ್ಲಿ ಜಾಸ್ತಿಯಾಗಿರುವುದು ಕಂಡು ಬಂದಿದೆ

ಈಗಾಗಲೇ ಅಲ್ಲಿ ಏನು ಔಷಧ ಬೇಕು ಅದನ್ನು ನಾವು ವಿತರಣೆ ಮಾಡಿದ್ದೇವೆ ಈಗ ರಾಜ್ಯಮಟ್ಟದಿಂದಲೂ ಸಹ ಒಂದು ತಜ್ಞರ ತಂಡವನ್ನು ಅಲ್ಲಿಗೆ ಕಳುಹಿಸಿ ಕೊಡುವ ಬಗ್ಗೆ ತೀರ್ಮಾನವನ್ನು ನಮ್ಮ ಇಲಾಖೆಯವರಿಗೆ ತಿಳಿಸಿದ್ದೇವೆ ಈ ವಾರದೊಳಗೆ ಅಲ್ಲಿ ನಮ್ಮ ತಜ್ಞರ ತಂಡವೊಂದು ಅಲ್ಲಿಗೆ ಹೋಗುತ್ತಿದೆ ಅದರ ಜೊತೆಗೆ ನಮ್ಮ ಆರೋಗ್ಯ ಸಹಾಯಕರು ಮುಖ್ಯವಾಗಿ ಅವರು ರಕ್ತ ಪರೀಕ್ಷೆಯನ್ನು ಮಾಡಬೇಕು, ಆ ಭಾಗದಲ್ಲಿ ಅವೇರ್‌ನೆಸ್ ಕ್ರಿಯೇಟ್ ಮಾಡಬೇಕಾಗುದೆ ಅವರಿಗೆ ಮೆಡಿಸಿನ್ ಅನ್ನು ಆ ಟ್ಯಾಬ್ಲೆಟ್‌ನ್ನು ಕೊಡಬೇಕಾಗುದೆ ಅದಕ್ಕಾಗಿ ನಾವು 20 ಜನರನ್ನು ಅಲ್ಲಿ ಸುತ್ತಮುತ್ತಲೂ ಇರುವ ತಾಲ್ಲೂಕಿನ ಎಲ್ಲಿ ಪಿಹೆಚ್‌ಸಿ ಮಲೇರಿಯಾ ಏರಿಯಾ ಇದೆ, ಅಲ್ಲಿಗೆ ಕಳುಹಿಸಿಕೊಡುವ ಬಗ್ಗೆ ವ್ಯವಸ್ಥೆ ಮಾಡುತ್ತೇನೆ ಕೂಡಲೇ ಆ ಬಗ್ಗೆ ಆದೇಶವನ್ನು ಮಾಡುತ್ತೇನೆ ಕರ್ನಾಟಕ ರಾಜ್ಯದಲ್ಲಿ ಈ ತರಹ ಮಲೇರಿಯಾ ಇರತಕ್ಕಂಥಹ ಏರಿಯಾಗಳನ್ನು ನಾವು ಗುರುತು ಮಾಡುತ್ತಿದ್ದೇವೆ ಈಗಾಗಲೇ ನಾವು ಶಿರಹಟ್ಟಿ ಕಡೆ ಮಲೇರಿಯಾ ಆಗಿದೆ ಅಲ್ಲಿ ನಾಲೆ ಬಂದು ವರ್ಷ ಪೂರ್ತಿ ಅಲ್ಲಿ ನೀರು ನಿಲ್ಲುತ್ತದೆ ಅದರಿಂದ ಸೊಳ್ಳೆ ವಿಪರೀತವಾಗಿ ಪ್ರಾರಂಭವಾಗಿ ಅಲ್ಲಿಯೂ ಸಹ ಮಲೇರಿಯಾ ವರ್ಷಪೂರ್ತಿ ಇರುವುದು ನಮ್ಮ ಗಮನಕ್ಕೆ ಬಂದಿದೆ ಆ ಪೂರ್ತಿ ಏರಿಯಾಕ್ಕೆ ಸೊಳ್ಳೆ ಪರದೆಯನ್ನು ಕೊಡುವುದಕ್ಕೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ ಶಿರಹಟ್ಟಿಯಲ್ಲಿರುವ ಎಲ್ಲಾ ಗ್ರಾಮಕ್ಕೂ ಅಲ್ಲಿರುವಂತಹ ಎಲ್ಲಾ ಮನೆಗಳಿಗೂ ಉಚಿತವಾಗಿ ಎರಡೆರಡು ಸೊಳ್ಳೆಪರದೆಯನ್ನು ಕೊಡುವ ಬಗ್ಗೆ ನಾವು ಕ್ರಮವನ್ನು ತೆಗೆದು ಕೊಳ್ಳುತ್ತದ್ದೇವೆ ಅದರಿಂದಾಗಿ ಮುಂಬರುವ ದಿನಗಳಲ್ಲಿ ಈ ತರಹ ಮಲೇರಿಯಾ ಪ್ರತಿವರ್ಷ ಇದು continuesಆಗಿ ಬರತಕ್ಕಂಥಹ ಏರಿಯಾ ಯಾವುದು ಇದೆ, ಕೋಲಾರ ಹಾಗೂ ಉಡುಪಿ ಇರಬಹದು, ರಾಯಚೂರು ಇಲ್ಲಿ ರೆಗ್ಯುಲರ್‌ಆಗಿ ಬರುತ್ತಿದೆ ಅಂತಹ ಏರಿಯಾಗಳಲ್ಲಿ ಈ ತರಹದ ಜನ ಯಾರು ಬಡವರು ಇದ್ದಾರೆ, ಬೀದಿಯಲ್ಲಿ ಯಾರು ಕೂಲಿ ಕೆಲಸವನ್ನು ಮಾಡುತ್ತಾರೆ, ಬೀದಿಯಲ್ಲಿ ಮಲಗುತ್ತಾರೆ ಅವರುಗಳು ಸೊಳ್ಳೆಯಿಮದ ಕಚ್ಚಿಸಕೊಂಡು ಮಲೇರಿಯಾ ಬರುತ್ತದೆ, ಇವರೆಲ್ಲರಿಗೂ ನಾವು ಸೊಳ್ಳೆ ಪರದೆಯನ್ನೇ ಫ್ರೀ ಆಗಿ ಕೊಡಬೇಕೆಂದು ಆರೋಗ್ಯ ಇಲಾಖೆಯು ಆದಷ್ಟು ಬೇಗನೆ ತೀರ್ಮಾನವನ್ನು ಶೀಘ್ರವಾಗಿ ತೆಗೆದುಕೊಂಡು ಅವರಿಗೆ ಸಹಾಯ ಮಾಡುತ್ತೇವೆ

ಶ್ರೀ ಜಯಪ್ರಕಾಶ ಹೆಗ್ಡೆ stagnant waterನಲ್ಲಿ ಗಪ್ಪಿ ಮೀನುಗಳನ್ನು ಹಾಕುವಂಥಹ ವ್ಯವಸ್ಥೆ ಮಾಡಬೇಕು ಏಕೆಂದರೆ ಅದು ಲಾರ್ವ ಅನ್ನು ತಿನ್ನುತ್ತದೆ ಗಪ್ಪಿ ಮೀನುಗಳನ್ನು ತೆಗೆದುಕೊಂಡು ಹೋಗಿ ಸ್ವಲ್ಪ ಡಿಸ್ಟ್ರಿಬ್ಯೂಟ್ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ

ಊ) ವಿಷಯ ಶಿರಹಟ್ಟಿ ಕ್ಷೇತ್ರದಲ್ಲಿ ಮಲೇರಿಯಾ ವ್ಯಾಪಕವಾಗಿ ಹರಡಿರುವ ಬಗ್ಗೆ

ಶ್ರೀ ಎಸ್ ಗಡ್ಡದೇವರ ಮಠ(ಶಿರಹಟ್ಟಿ) ಮಾನ್ಯ ಅಧ್ಯಕ್ಷರೆ, ನನಗೆ ಎರಡೇ ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ ಆಗಲೇ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ, ನಾನು ಬರುವುದು 5 ನಿಮಿಷ ತಡವಾದುದರಿಂದ ನಾನು ಅವಕಾಶವನ್ನು ಕಳೆದುಕೊಂಡೆ ಶಿರಹಟ್ಟಿಯೊಳಗೆ ವರವಿ ಕ್ಷೇತ್ರ ಒಂದು ಪುಣ್ಯ ಕ್ಷೇತ್ರವಾಗಿದ್ದರಿಂದ ಸುಮಾರು ಜನ ಯಾತ್ರಾರ್ಥಿಗಳು ಅಲ್ಲಿಗೆ ಬಂದು ಈಗ ಈಗ ಅದು ಮಲೇರಿಯಾ ಕೇಂದ್ರ ಸ್ಥಾನವಾಗಿದೆ ಸುಮಾರು 40 ವರ್ಷದ ಉದ್ದಕ್ಕೂ ವರವಿ ಯಾತ್ರಾಸ್ಥಳವಾದ್ದರಿಂದ ಜನ ಅಲ್ಲಿ ಅಸ್ವಸ್ಥರಾಗಿ ಮಲೇರಿಯಾ ಸಮಸ್ಯೆ ಕಾಡುತ್ತಿದೆ ಏಪ್ರಿಲ್ ತಿಂಗಳೂ ಬಂತೆಂದರೆ ಅಲ್ಲಿ ಮಲೇರಿಯಾ ಬಂತೆಂದು ಊರು ಬಿಟ್ಟು ಹೋಗುವಂಥಹ ಸಂಧರ್ಭ ಸೃಷ್ಟಿಯಾಗಿದೆ ನಾನು ಇಲ್ಲವೆಂದು ಹೇಳುವುದಾಕ್ಕಾಗುವುದಿಲ್ಲ ಸರ್ಕಾರ ದವರು ಈಗಾಗಲೇ 500 medicated mosquito nets ಕೊಟ್ಟಿದ್ದಾರೆ ಆದರೆ ಅಲ್ಲಿ ಇದ್ದಂತಹ ಜನಸಂಖ್ಯೆಗೆ ಅದು ಸಾಲದಾಗಿದೆ ನಮ್ಮ ಭಾಗದ ಮನೆಗಳ ಪರಿಸ್ಥಿತಿ ನಿಮಗೆಲ್ಲ ಗೊತ್ತಿದೆ ನಮ್ಮಲ್ಲಿ ಇರುವುದು ಜನ ದನ ಒಂದೇಕಡೆ ಇರುವಂಥಹ ಪರಿಸ್ಥಿತಿ ಇದೆ ವಿಶೇಷವಾಗಿ ರೈತಾಪಿ ಜನರು ಇರುವುದರಿಂದ ಹಳ್ಳಿಯ ಸುತ್ತಲೂ ಈಗ 100 ಮೀಟರ್‌ನೊಳಗಡೆ ಸುತ್ತುವರಿದಂತಹ ಒಂದು ಹಳ್ಳ ಆಮೇಲೆ ಅದು ಕಬ್ಜದ ಮೇಲೆ ಡಿಪೆಂಡ್ ಆಗಿರುತ್ತದೆ ಅದರಲ್ಲಿ ವಿಶೇಷವಾಗಿ ಜನಗಳು, ದನಗಳು, ಕೂಡಿಯೇ ಇರುವಂಥಹ ವ್ಯವಸ್ಥೆಯಾಗಿದೆ ಅದಕ್ಕಾಗಿ ಮಲೇರಿಯಾದಿಂದ ಮುಕ್ತಿ ಆಗುತ್ತದೆಯೋ ಅಥವಾ ಇಲ್ಲವೋ ಎನ್ನುವಂಥಹದ್ದು ಇದೆ ಸನ್ಮಾನ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುವುದಿಷ್ಟೇ, ಮಲೇರಿಯಾ ಬಂದಾಗ ಒಮ್ಮೆ ಸರ್ಕಾರವು ಜಾಗ್ರತೆಯನ್ನು ಮಾಡುವಂಥಹ ಕೆಲಸವನ್ನು ನಾವು ಇಲ್ಲಿ